# ಕಾರಂತರ ರಂಗಪ್ರಯತ್ನಗಳು

ಐ.ಕೆ. ಬೊಳುವಾರು

೧೯೭೦-೭೧ರಲ್ಲಿ ಹೆಗ್ಗೋಡು-ಉಡುಪಿಗಳಲ್ಲಿ ಸುಮಾರು ೨೦೦ರಷ್ಟು ಮಕ್ಕಳಿಗೆ ಕತೆ ಹೇಳಿ, ಹಾಡು ಹಾಡಿ ದೃಶ್ಯರೂಪದಲ್ಲಿ ಕಟ್ಟಿಕೊಟ್ಟ **ಪಂಜರಶಾಲೆ, ಹೆಡ್ಡಧೂಮನ ಕತೆ, ಏಕಲವ್ಯ**ದಂತಹ ನಾಟಕ ಪ್ರಯೋಗಗಳನ್ನು ಪ್ರಯೋಗಿಸಿದ ಬಿ.ವಿ. ಕಾರಂತರೇ ಕನ್ನಡ ಮಕ್ಕಳ ರಂಗಭೂಮಿಯನ್ನು ನಾಡಿನಾದ್ಯಂತ ವ್ಯಾಪಕವಾಗಿ ಒಂದು ಬಗೆಯ ಚಳುವಳಿಯ ರೀತಿಯಲ್ಲಿ ಬೆಳೆದು ಬರುವುದಕ್ಕೆ ಕಾರಣ ರಾದವರು ಎಂದು ನನ್ನನ್ನು ಸೇರಿ ಹಲವು ಮಕ್ಕಳ ರಂಗಭೂಮಿಯ ಕಾರ್ಯಕರ್ತರು ಒಪ್ಪಿಕೊಂಡಿರುವುದಂತೂ ನಿಜದ ಮಾತು.

ಆದರೆ ಅದಕ್ಕೂ ೪೦ ವರುಷಗಳ ಹಿಂದೆಯೇ ಡಾ. ಶಿವರಾಮ ಕಾರಂತರು ಮಕ್ಕಳ ರಂಗಭೂಮಿಯ ಅಪಾರ ಸಾಧ್ಯತೆಗಳ ಬಗ್ಗೆ ಹಲವು ಹತ್ತು ಬಗೆಯ ಪ್ರಯೋಗಗಳನ್ನು ಮಾಡಿದ್ದಾರೆ ಮತ್ತು ಅವುಗಳನ್ನು ವಿವರಿಸುತ್ತಾ ವಿಶ್ಲೇಷಿಸುತ್ತಾ ಹೋದರೆ ಶಿವರಾಮ ಕಾರಂತರ ಕೆಲಸಗಳ ಆರಾಧನೆಯೇ ಆಗಿಬಿಡಬಹುದು ಎನ್ನುವ ಅನುಮಾನ ನನಗಿದ್ದರೂ ಆ ಬಗೆಗಿನ ಕೆಲವು ವಿವರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

ಮಕ್ಕಳ ರಂಗಭೂಮಿ ಎನ್ನುವುದು ಒಂದು ಬೆರಗು. ಅದು ಸೃಜನಶೀಲವಾದದ್ದು. ಅದು ಎಲ್ಲರ ಸಹಭಾಗಿತ್ವದ ಅಂತರ್‌ಕ್ರಿಯಾತ್ಮಕ ಬೆಳವಣಿಗೆಗೆ ದಾರಿ ಮಾಡಿಕೊಡುವ ವಿಶಿಷ್ಟ ಶಕ್ತಿಯುಳ್ಳದ್ದು. ಇದು ಜನರಿಗೆ ಬೋಧನೆ ನೀಡುವುದಿಲ್ಲ, ಆದರೆ ಜನರೊಂದಿಗೆ ಅಂದರೆ ಮಕ್ಕಳೊಂದಿಗೆ ಮಾತನಾಡುತ್ತದೆ. ನೋಡುಗರನ್ನು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳಲು ಅವಕಾಶ ನೀಡುತ್ತದೆ. ಮಕ್ಕಳ ರಂಗಭೂಮಿಯ ಸಹಭಾಗಿಗಳು ತಮ್ಮ ಯೋಚನೆಗಳನ್ನು, ಅಭಿಪ್ರಾಯಗಳನ್ನು ಗುಂಪು ಗಳಲ್ಲಿ ಮತ್ತು ಒಬ್ಬೊಬ್ಬ ಸ್ನೇಹಿತರೊಂದಿಗಾದರೂ ಹಂಚಿಕೊಳ್ಳಲು ಸಾಧ್ಯವಾಗುತ್ತದೆ.

ಡಾ. ಶಿವರಾಮ ಕಾರಂತರು ತಮ್ಮ ನಾಟಕ ಪ್ರಯೋಗಗಳನ್ನು, ಪ್ರದರ್ಶನಗಳನ್ನು, ನಾಟಕ ಕೃತಿ ರಚನೆಯನ್ನು ಮಕ್ಕಳ ರಂಗಭೂಮಿ

ಎನ್ನುವ ಶೀರ್ಷಿಕೆಯಲ್ಲಿ ನಡೆಸಲಿಲ್ಲ ಎನ್ನುವುದನ್ನು ಹೊರತುಪಡಿಸಿದರೆ ಅವರು ರಚಿಸಿ ಪ್ರಯೋಗಿಸಿದ ೧೦೦ಕ್ಕೂ ಹೆಚ್ಚು ನಾಟಕ ಕೃತಿಗಳು ಮಕ್ಕಳ ರಂಗಭೂಮಿಗೆ ಅವರು ನೀಡಿದ ಅಪಾರ ಕೊಡುಗೆಯೇ ಆಗಿದೆ.

ಡಾ. ಕಾರಂತರ ನಿಕಟವರ್ತಿಯಾಗಿದ್ದ ಶ್ರೀಮತಿ ಮಾಲಿನಿ ಮಲ್ಯರು ಹೇಳುವ ಹಾಗೆ ೧೯೨೯ರಲ್ಲೇ ಕಾರಂತರು ಅಸ್ಪೃಶ್ಯರನ್ನು ಕುರಿತು ನಾಟಕ ಪ್ರದರ್ಶಿಸಿದ್ದಾರೆ. ವ್ಯವಸಾಯೀ ನಾಟಕ ಮೇಳಗಳು ಆ ದಿನಗಳಲ್ಲಿ ಕುಗ್ರಾಮಗಳನ್ನು ಸಂದರ್ಶಿಸುವ ಪ್ರಶ್ನೆಯೇ ಇರಲಿಲ್ಲ. ಅವಿದ್ಯಾವಂತ ಜನರೇ ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದ ಹಳ್ಳಿಗಳಲ್ಲಿ ಅಂದು ಹವ್ಯಾಸಿ ನಾಟಕಗಳನ್ನು ಕಾಣುವುದೂ ಸಾಧ್ಯವಿರಲಿಲ್ಲ. ಅಂತಹ ದುರ್ದಿನಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಹಲವಾರು ಕುಗ್ರಾಮಗಳಿಗೆ ಶಿವರಾಮ ಕಾರಂತರ ಪ್ರಯತ್ನ ಗಳಿಂದಾಗಿಯೇ ಅಪರೂಪಕ್ಕಾದರೂ ನಾಟಕಗಳನ್ನು ಕಾಣುವ ಭಾಗ್ಯ ಲಭಿಸಿತ್ತು. ಕನ್ನಡ ರಂಗಭೂಮಿಯ ಇತಿಹಾಸದಲ್ಲಿಯೇ ಇದೊಂದು ಮಹತ್ವದ ಅಧ್ಯಾಯ. ಆದರೆ ಕನ್ನಡ ರಂಗಭೂಮಿಯ ಪರಂಪರೆಯನ್ನು, ಇತಿಹಾಸವನ್ನು ಬಿತ್ತಿದ ಯಾವ ಲೇಖಕರೂ ಈ ಕುರಿತು ಉಲ್ಲೇಖಿಸಿಯೇ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಶಿವರಾಮ ಕಾರಂತರು ತಮ್ಮ ಬಾಲ್ಯದ ದಿನಗಳಲ್ಲಿ ಗಮನಿಸಿದ ರಂಗಭೂಮಿ ಅಂದರೆ ೧೯೧೧ರಿಂದ ೧೯೨೦ರ ಮಧ್ಯಾವಧಿಯ ರಂಗಭೂಮಿ ಎಂದರೆ ಕುಂದಾಪುರದ ಸುತ್ತಮುತ್ತ ನಡೆಯುತ್ತಿದ್ದ ವಿಲಾಸೀ ರಂಗಭೂಮಿಯ ಚಟುವಟಿಕೆಗಳು. ನಾಟಕದಲ್ಲಿ ಅಭಿರುಚಿ ಇರುವ ಕೆಲವು ಸ್ನೇಹಿತರು ಸೇರಿಕೊಂಡು ಯಾರ ಮನೆಯ ಅಟ್ಟದಲ್ಲಿಯಾದರೂ ಅಭ್ಯಾಸದ ನೆಪದಲ್ಲಿ ಯಾರ ನಿರ್ದೇಶನದ ಸಹಾಯವೂ ಇಲ್ಲದೆ ಅವರವರಿಗೆ ತಿಳಿದಂತೆ ಅಭಿನಯಿಸುವ ಪೌರಾಣಿಕ ನಾಟಕಗಳು. ನಟರಾದರೋ ತಮ್ಮ ತಮ್ಮ ಮನೆ ಯಿಂದಲೋ ನೆರೆಮನೆಯವರಿಂದಲೋ ಸೀರೆ, ಪಟ್ಟೆಸೀರೆಗಳನ್ನು ತಂದು ಅದನ್ನೇ ಧರಿಸಿಕೊಂಡು ಆಡುತ್ತಿದ್ದ ದಿನಗಳವು. ಆ ದಿನಗಳಲ್ಲಿ ಜಿಲ್ಲೆಗೆ ವರದಾಚಾರ್ಯರ ನಾಟಕ ಕಂಪೆನಿ ಬಂದು ಹೋಗಿತ್ತಾದುದರಿಂದ ಆ ಕಂಪೆನಿಯ ನಾಟಕಗಳ ಸಾಮಾನ್ಯ ಅನುಕರಣೆಯನ್ನು ಈ ಹವ್ಯಾಸಿ ತಂಡಗಳವರು ಮಾಡುತ್ತಿದ್ದರು. ಸಾಲಾಗಿ ನಿಲ್ಲಿಸುತ್ತಿದ್ದ ಹದಿನಾಲ್ಕು ಬತ್ತಿಗಳ ಜರ್ಮನ್ ಲ್ಯಾಂಪ್‌ಗಳ ಬೆಳಕಿನಲ್ಲಿ ರಾತ್ರಿ ೧೦ ಗಂಟೆಗೆ ಆರಂಭಿಸಿ ಮಧ್ಯರಾತ್ರಿ ಕಳೆದು ಎರಡು ಗಂಟೆಯ ತನಕವೂ ಮುಂದುವರಿಯುತ್ತಿದ್ದಂತಹ ಪ್ರದರ್ಶನಗಳು. ಆ ನಾಟಕಗಳಿಗೆ ಪ್ರವೇಶ ಧನ ಬೇರೆ. ಒಂದು ರೂಪಾಯಿ, ಎಂಟಾಣೆ, ನಾಲ್ಕಾಣೆ, ಎರಡಾಣೆಗಳ ಟಿಕೇಟು ಪಡೆದು ನೆಲದ ಮೇಲೆ ಹಾಸಿದ ಚಾಪೆಗಳ ಮೇಲೆ ಕುಳಿತು ನಾಟಕ ನೋಡಬೇಕು.

ಈ ದಿನಗಳಲ್ಲಿಯೇ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮೂರು ವೃತ್ತಿಪರ ಸಂಸ್ಥೆಗಳು ಹುಟ್ಟಿಕೊಂಡು ಅವುಗಳಲ್ಲಿ ಒಂದು ಅಖಿಲ ಕರ್ನಾಟಕ ಖ್ಯಾತಿಯನ್ನು ಹೊಂದಿತ್ತಾದ ರಿಂದ ಉಳಿದೆರಡು ಕಂಪೆನಿಗಳು ಬೇರೆ ಬೇರೆ ಕಾರಣಗಳಿಂದ ನಿಂತು ಹೋದವು. ೧೯೧೬ರಲ್ಲಿ ಆರಂಭಗೊಂಡ ಶ್ರೀ ಅಂಬಾಪ್ರಸಾದಿತ ನಾಟಕ ಮಂಡಳಿಯಲ್ಲಿ ಅದು ತನಕ ನಟರಾಗಿ, ಸಂಗೀತಗಾರರಾಗಿ, ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದ ಮುಂಡಾಜೆ

ರಂಗನಾಥ ಭಟ್ಟರು ೧೯೨೩ರಲ್ಲಿ ಕಂಪೆನಿಯ ಮಾಲಕರಾಗಿಯೂ ಜವಾಬ್ದಾರಿಯಿಂದ ಮುನ್ನಡೆಸತೊಡಗಿದರು. ೧೯೨೯ರಲ್ಲಿ ಶಿವರಾಮ ಕಾರಂತರು ಮರಾಠಿ ನಾಟಕಕಾರ ಗಡ್ಕರಿಯವರ ಏಕಚಾಪ್ಯಾಲಾದ ಕನ್ನಡ ಅನುವಾದ **ನಿಶಾಮಹಿಮೆ**ಯನ್ನು ಸ್ವತಃ ತಾವೇ ಈ ಕಂಪೆನಿಯ ನಟರಿಂದ ಆಡಿಸಿದ್ದರು. ಇದರೊಂದಿಗೆ ಕಾರಂತರೇ ಬರೆದಿದ್ದ ಇನ್ನೊಂದು ನಾಟಕ **ಸತಿ ಸಂಯುಕ್ತೆ**ಯನ್ನೂ ಈ ಕಂಪೆನಿಯವರೇ ಆಡುತ್ತಿದ್ದರು. ಈ ಕಂಪೆನಿಯು ಕೊಳ್ಳೇಗಾಲದಲ್ಲಿ ಕ್ಯಾಂಪ್ ಮಾಡಿದಾಗ ಶಿವರಾಮ ಕಾರಂತರು ಇದರ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದು ಅಲ್ಲದೆ ಕಂಪೆನಿಯ ನಟವರ್ಗದಿಂದ ಬೇರೆ ಬೇರೆ ನಾಟಕಗಳನ್ನು ಅಭ್ಯಾಸ ಮಾಡಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು.

ಆ ದಿನಗಳಲ್ಲಿಯೇ ದಕ್ಷಿಣಕನ್ನಡ ಜಿಲ್ಲೆಗೆ ಬಂದು ನಾಟಕವಾಡಿ ಹೋಗುತ್ತಿದ್ದ ಹಲವಾರು ನಾಟಕ ಕಂಪೆನಿಗಳ ಮಾಲಕರೊಂದಿಗೆ ನಟರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಕಾರಂತರು ಆ ಕಾಲದ ಕಂಪೆನಿ ನಾಟಕಗಳ ಎಲ್ಲಾ (ವರದಾಚಾರ್ಯರ ರತ್ನಾವತಿ ಕಂಪ್ನಿ, ಗರೂಡ ಸದಾಶಿವರಾಯರು, ಗುಬ್ಬಿ ವೀರಣ್ಣನವರು) ಆಗು ಹೋಗುಗಳನ್ನೂ ಬಲ್ಲವರಾಗಿದ್ದರು.

ಒಟ್ಟಿನಲ್ಲಿ ಆ ಕಾಲದಲ್ಲಿ ಪಾರ್ಸಿ ರಂಗಭೂಮಿಯ ಅನುಕರಣೆಯಾಗಿರುವ ವ್ಯವಸಾಯೀ ನಾಟಕ ಕಂಪೆನಿಗಳು ಜಿಲ್ಲೆಗೆ ಪ್ರವಾಸ ಬಂದು ನಾಟಕವಾಡುತ್ತಿದ್ದವು.

ಹವ್ಯಾಸಿಗಳು ನಾಟಕವಾಡುವುದು ಸುಲಭದ ಕೆಲಸವಾಗಿರಲಿಲ್ಲ. ಬಾಡಿಗೆಗೆ ಪರದೆಗಳನ್ನು ತರುವುದು, ಮೇಕಪ್ ಕಲಾವಿದರಿಗೆ ಹಣ ನೀಡಿದರೂ ನಿಗದಿತ ದಿನಗಳಲ್ಲಿ ದೊರಕದೇ ಇರುವುದು.

ಬೆಳಕಿನ ವ್ಯವಸ್ಥೆಗೆ ಸಂಬಂಧಪಟ್ಟ ಹಾಗೆ ಮೊದಮೊದಲು ಎಣ್ಣೆಯ ತೂಗುದೀಪ, ಸರಪಣಿ ದೀಪ, ಅಟ್ಟೆ ದೀಪಗಳು ಆ ಬಳಿಕ ಸಾಮಾನ್ಯ ಲಾಟಾನುಗಳ ಬಳಕೆ, ಅದಾದ ಮೇಲೆ ೧೪ ಲೈನಿನ ೧೮ ಲೈನಿನ ಜರ್ಮನ್ ಲ್ಯಾಂಪುಗಳ ಉಪಯೋಗ ಕ್ರಮೇಣ ಕಿಟ್ಸನ್ ಲ್ಯಾಂಪ್, ಪೋಲಾರ್ ಲೈಟ್, ಗ್ಯಾಸ್ ಲೈಟುಗಳ ಜೋಡಣೆಯ ಮೂಲಕವೇ ನಾಟಕ ಪ್ರದರ್ಶನ ನಡೆಯಬೇಕಾಗಿತ್ತು. ಹೀಗಾಗಿ ನಾಟಕ ಪ್ರದರ್ಶನ ಬಹಳ ಕಷ್ಟದ ಕೆಲಸ ಎನ್ನುವುದೇ ಎಲ್ಲರ ನಂಬಿಕೆಯಾಗಿದ್ದಂತಹ ದಿನಗಳು. ಇವತ್ತು ಅಂದರೆ ಕಾರಂತರು ಮಕ್ಕಳ ರಂಗಭೂಮಿಯ ಪ್ರಯೋಗಗಳನ್ನು ನಡೆಸಿದ ೭೫ ವರ್ಷಗಳ ಬಳಿಕ ಸಾಂಪ್ರದಾಯಿಕ ರಂಗಭೂಮಿ ಮತ್ತು ಕ್ರಿಯಾತ್ಮಕ ರಂಗಭೂಮಿಯ ವ್ಯತ್ಯಾಸಗಳನ್ನು ಗುರುತಿಸುವ ಬಗೆಯನ್ನು ಗಮನಿಸಿ.

ಸಾಂಪ್ರದಾಯಿಕ ರಂಗಭೂಮಿಯಲ್ಲಿ ಒಂದು ನಾಟಕವು ರಂಗಮಂದಿರದಲ್ಲಿ ಪ್ರದರ್ಶನದ ಮೂಲಕ ಘಟಿಸುತ್ತದೆ. ಅಲ್ಲಿ ನಾಟಕದ ಸಾಲುಗಳನ್ನು ಉರು ಹೊಡೆದು ಕಲಿಯಲಾಗುತ್ತದೆ. (ಎಷ್ಟೋ ಬಾರಿ ಮಕ್ಕಳಿಗೆ ಇದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ) ಒಬ್ಬ ನಿರ್ದೇಶಕ ಸಾಮಾನ್ಯವಾಗಿ ನಿರ್ದಿಷ್ಟ ಸಲಹೆಗಳನ್ನು ಸೂಚನೆಗಳನ್ನು ನೀಡುತ್ತಾನೆ. ಮಕ್ಕಳ ಚಿಂತನೆಗಳಿಗಿಂತಲೂ ವಯಸ್ಕರ ಮನೋಭಾವಗಳಿಗೆ ಈ ಸೂಚನೆಗಳು ಹೊಂದಿಕೊಳ್ಳುತ್ತವೆ. ಪರಿಪೂರ್ಣವಾದ ವೇಷಭೂಷಣ ಮತ್ತು

ರಂಗಪರಿಕರ ನಾಟಕದ ಅವಿಭಾಜ್ಯ ಅಂಗವಾಗಿರುತ್ತದೆ. ಎಷ್ಟೋ ಬಾರಿ ಇವು ನಿಜ ಸಂವಹನಕ್ಕೆ ತೊಡಕನ್ನೇ ಉಂಟುಮಾಡುತ್ತವೆ. ಪ್ರೊಸೀನಿಯಂ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳುವ ಸಾಂಪ್ರದಾಯಿಕ ನಾಟಕಗಳು ವ್ಯವಸ್ಥಿತ ರಂಗಸಜ್ಜಿಕೆಯನ್ನು ಹೊಂದಿರುತ್ತವೆ. ನಟರು ಮತ್ತು ಪ್ರೇಕ್ಷಕರನ್ನು ಪ್ರತ್ಯೇಕವಾಗಿ ಇರಿಸಲಾಗುತ್ತದೆ ಮತ್ತು ಪ್ರೇಕ್ಷಕರಿಗೋಸ್ಕರವೇ ನಟರು ನಾಟಕಗಳನ್ನು ಅಭಿನಯಿಸುತ್ತಾರೆ.

ನಿರ್ದಿಷ್ಟ ಪರಿಣಾಮ ಬೀರಬೇಕೆನ್ನುವ ಉದ್ದೇಶದಿಂದಲೇ ರಿಹರ್ಸಲ್, ತರಬೇತಿಗಳನ್ನು ನೀಡಲಾಗುತ್ತದೆ. ನಿರ್ದೇಶಕ ಸಾಮಾನ್ಯವಾಗಿ ಅಸಂಖ್ಯಾತ ನಿರ್ದೇಶನ ಸೂಚನೆಗಳನ್ನು ತರಬೇತಿ ಸಂದರ್ಭದಲ್ಲಿ ನೀಡುತ್ತಾನೆ.

ಆದರೆ ಶೈಕ್ಷಣಿಕ ಮಕ್ಕಳ ರಂಗಭೂಮಿಯಲ್ಲಿ ನಿರ್ದಿಷ್ಟ ರಂಗವೇದಿಕೆ ಇರುವುದಿಲ್ಲ. ಲಭ್ಯವಿರುವ ಪರಿಸರವನ್ನು ಮುಕ್ತವಾಗಿ ಬಳಸಿಕೊಳ್ಳಲಾಗುತ್ತದೆ. ಮಕ್ಕಳು ಸಹಜವಾಗಿ ಆಟ ಆಡುವ ಹಾದಿ ಇದಾಗಿದೆ. ಕತೆ, ಸಂಭಾಷಣೆ ಮತ್ತು ಕ್ರಿಯೆಯನ್ನು ಆಶು ವಿಸ್ತರಣೆಯ ಮೂಲಕ ಕಟ್ಟಲಾಗುತ್ತದೆ.

ಶೈಕ್ಷಣಿಕ ರಂಗಭೂಮಿಯು ಅವರ ನಡುವಣ ಒಬ್ಬ ನಾಯಕನ ಸಲಹೆ ಯೊಂದಿಗೆ ಮಕ್ಕಳೊಂದಿಗಿನ ಚರ್ಚೆ ಮತ್ತು ಕೆಲಸಗಳ ಮೂಲಕ ಅವರ ಚಿಂತನೆಗಳನ್ನೇ ಹೊರತರುವ ಪ್ರಯತ್ನ ಮಾಡುತ್ತದೆ.

ವೇಷಭೂಷಣ, ರಂಗಪರಿಕರಗಳು ಅಷ್ಟು ಮುಖ್ಯವಾಗುವುದಿಲ್ಲ. ಆದರೆ ಸುಲಭ ದಲ್ಲಿ ಸಿಗುವ ವಸ್ತುಗಳನ್ನೇ ಅತ್ಯುತ್ತಮ ವೇಷಭೂಷಣ, ಪರಿಕರಗಳಾಗಿ ಬದಲಾಯಿಸಿ ಕೊಳ್ಳುವ ಸೃಜನಶೀಲ ಶಕ್ತಿ ಶೈಕ್ಷಣಿಕ ರಂಗಭೂಮಿಗಿದೆ. ಶರೀರದ ಚಲನೆ, ನಟನೆ ಮತ್ತು ಸೃಷ್ಟಿಸಲಾದ ಸಂಭಾಷಣೆಯ ಮೂಲಕ ನಾಟಕ ಬೆಳೆಯುತ್ತದೆ. ಲಭ್ಯ ವಸ್ತುಗಳು ಪರಿಣಾಮಕಾರೀ ರಂಗಸಜ್ಜಿಕೆಗಳಾಗುತ್ತದೆ.

ನಟರು ಮತ್ತು ಪ್ರೇಕ್ಷಕರ ನಡುವೆ ಅಂತಹ ವಿಭಾಗವೇನೂ ಇರುವುದಿಲ್ಲ. ಅವರು ಆಟ ಆಡುತ್ತಲೇ ಅಭಿನಯಿಸುವುದರಿಂದ ಪ್ರೇಕ್ಷಕರ ಗಮನವಿಲ್ಲದೆಯೇ ತೊಡಗಿಸಿಕೊಳ್ಳುತ್ತಾರೆ.

ಉದಾ : ಒಂದು ಘಟನೆಯನ್ನು ಒಂದು ಮಕ್ಕಳ ತಂಡ ಅಭಿನಯಿಸಿದಾಗ ಇನ್ನೊಂದು ತಂಡ ಪೂರಕವಾಗಿ ಸಂಗೀತ, ಶಬ್ದ ಸಹಕಾರ, ಸ್ಥಳಾವಕಾಶ ಇತ್ಯಾದಿ ಒದಗಿಸುತ್ತಾರೆ ಮತ್ತು ಅವರ ಸರದಿ ಬಂದಾಗ ಅದೇ ಘಟನೆಯನ್ನು ಬೇರೆಯೇ ನಾಟಕವಾಗಿ ನಿರೂಪಿಸಬಲ್ಲರು. ಆ ಸಂದರ್ಭದಲ್ಲಿ ಅವರ 'ಸ್ಪರ್ಧಾ ವಿರೋಧಿಗಳು' ಯಾವುದೇ ತಡೆಯಿಲ್ಲದೆ ಸಂಗೀತ ಸಹಕಾರ ನೀಡಿ ಪ್ರದರ್ಶನದ ಯಶಸ್ಸಿಗೆ ಸಹಕರಿಸುವುದನ್ನು ಕಾಣಬಹುದು.

ಮಕ್ಕಳು ಕ್ರಿಯಾಶೀಲ ಅನುಭವಕ್ಕಾಗಿ ರಂಗಭೂಮಿಯನ್ನು ಬಳಸಿಕೊಳ್ಳುತ್ತಾರೆ. ಹಾಗಾಗಿ ಪ್ರತಿಯೊಂದು ಆಟ ಯಾ ಪ್ರದರ್ಶನವೂ ಪರಿಪೂರ್ಣವಾಗಿರುತ್ತದೆ. ಮಕ್ಕಳು ಹೊಸ ವ್ಯಾಖ್ಯಾನವನ್ನೇ ನಿರೂಪಿಸಬಲ್ಲವರಾಗಿರುತ್ತಾರೆ. ಇವರಿಗೆ ನಿರ್ದೇಶಕರ ಸಲಹೆ ಯಿಂದ ಯಾವುದೇ ತೊಂದರೆಯುಂಟಾಗುವುದಿಲ್ಲ. ಮತ್ತು ಪ್ರಯೋಗ ಪ್ರದರ್ಶನದ

ಬಳಿಕ ನಡೆಯುವ ಚರ್ಚೆಯಲ್ಲಿ ನಿರ್ದೇಶಕ ಮತ್ತು ನಟರು ಹೊಸ ಬದಲಾವಣೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಈ ವಿವರಗಳನ್ನು ಯಾಕೆ ಹೇಳಬೇಕಾಯಿತೆಂದರೆ.... ೧೯೩೦ರಿಂದ ೧೯೪೦ರ ನಡುವಣ ಅವಧಿಯಲ್ಲಿ ಶಿವರಾಮ ಕಾರಂತರು ಬೇರೆ ಬೇರೆ ಸಂದರ್ಭದಲ್ಲಿ ಬರೆದು, ಅಭ್ಯಾಸ ಮಾಡಿಸಿ ಪ್ರಯೋಗಿಸಿದ ಮಕ್ಕಳ ನಾಟಕಗಳ ವೈವಿಧ್ಯಗಳನ್ನು ಗಮನಿಸಬೇಕು.

ಗದ್ಯನಾಟಕ, ಪದ್ಯನಾಟಕ, ಆಶುನಾಟಕ, ಮೂಕನಾಟಕ, ಛಾಯಾನಾಟಕ, ಗೀತನಾಟಕ, ಗೊಂಬೆನಾಟಕ, ಪ್ರತಿಮಾ ನಾಟಕ, ಅಣಕವಾಡಗಳು, ವಿಕಟ ಪ್ರಹಸನ, ಹಾಸ್ಯ ನಾಟಕ ಇತ್ಯಾದಿ.

ಅವರು ಉಪ್ಪಿನಂಗಡಿ, ವಿಟ್ಲಗಳಲ್ಲಿ ನಡೆಸಿದ ಮಕ್ಕಳ ಕೂಟಗಳು, ಅಧಿವೇಶನಗಳು, ಉತ್ಸವಗಳು ಅತ್ಯಂತ ಮಹತ್ವದವೂ, ಪರಿಣಾಮಕಾರಿಯೂ, ಮಕ್ಕಳ ರಂಗಭೂಮಿಯ ಸಾಧ್ಯತೆಗಳ ಎಲ್ಲ ಪರಿಚಯವೂ ಆಗಿರುವುದು ಬೆರಗು ಹುಟ್ಟಿಸುವಂಥದ್ದು. ಮಕ್ಕಳ ಕೂಟಕ್ಕೆ ಪ್ರೇರಣೆ, ಸಹಕಾರ, ಅನುಮೋದನೆ ನೀಡಿದವರು ಸಹಕಾರಿ ಪಿತಾಮಹ ಮೊಳಹಳ್ಳಿ ಶಿವರಾಯರು.

**ಮಕ್ಕಳ ಕೂಟದ ಉದ್ದೇಶ**

೧. ಮಕ್ಕಳಿಗೆ ನಿಸರ್ಗ ಪ್ರೇಮವನ್ನು ಉಂಟು ಮಾಡುವುದಲ್ಲದೆ ಅವರ ಉತ್ಪಾದಕ ಶಕ್ತಿಯನ್ನು ವರ್ಧಿಸುವುದು.
೨. ಹಳ್ಳಿಯ ಸಾಹಿತ್ಯ ಜೀವನಗಳಲ್ಲಿ ಅಭಿರುಚಿಯನ್ನು ಪ್ರೇರೇಪಿಸುವುದು.
೩. ಯಾವತ್ತೂ ಮಕ್ಕಳಲ್ಲಿ ಒಂದು ಬಗೆಯ ಆತ್ಮ ಬಾಂಧವ್ಯವನ್ನು ಕಲ್ಪಿಸುವುದು.

**ಮಕ್ಕಳ ಕೂಟದ ವೇಳಾಪಟ್ಟಿ**

ಪ್ರಾತಃಕಾಲ ೫ಕ್ಕೆ ಜಾಗರ
೬ಕ್ಕೆ ಪ್ರಾರ್ಥನೆ
೭ಕ್ಕೆ ಊಟ
೮ ರಿಂದ ೧೦ರ ತನಕ ಕೂಟದ ನಿಗದಿತ ಕಾರ್ಯಕ್ರಮ
೧೦.೩೦ರಿಂದ ೧೨.೦೦ - ಸ್ನಾನ
೧೨ಕ್ಕೆ ಭೋಜನ
ಅಪರಾಹ್ನ ೨ - ೪.೩೦ರ ತನಕ ಕೂಟದ ನಿಗದಿತ ಕಾರ್ಯಕ್ರಮ
೪.೪೫ಕ್ಕೆ ಉಪಹಾರ ಬಳಿಕ ಆಟ
೬-೩೦ಕ್ಕೆ ಸಾಯಂಕಾಲದ ಪ್ರಾರ್ಥನೆ
೭ಕ್ಕೆ ಭೋಜನ
೮ರಿಂದ ೯.೩೦ ವಿನೋದಗಳು.
(ಕೂಟದ ನಿಗದಿತ ಕಾರ್ಯಕ್ರಮಗಳು ಎಂದರೆ.... ಬಂದಿರುವ ಪ್ರತಿನಿಧಿಗಳು

ತಮ್ಮ ಗೆಳೆಯರ ಸಂದೇಶಗಳನ್ನು ಓದುವುದು, ಹಿರಿಯರಿಂದ ಮಾತುಗಳು, ಅತಿಥಿಗಳ ಪರಿಚಯ, ಬಾಲಕರು ತಾವು ಸಂಗ್ರಹಿಸಿದ ಹಳ್ಳಿಯ ಹಾಡುಗಳನ್ನು ಹಾಡುವುದು.

ವಿವಿಧ ಬಣ್ಣದ ಮಣ್ಣುಗಳ ಸಂಗ್ರಹ ಮತ್ತು ಅವುಗಳಿಂದ ಚಿತ್ರಲೇಖನ, ವಿವಿಧ ಬಣ್ಣದ ಕಾಗದ ಚೂರುಗಳಿಂದ ನಾನಾತರದ ದೃಶ್ಯಗಳನ್ನು ಪ್ರತಿರೂಪಗಳನ್ನು ಕತ್ತರಿಸಿ ಅಂಟಿಸುವುದು, ಅಭಿನಯ ಗೀತೆಗಳು, ಪಶುಪಕ್ಷಿಗಳ ಸ್ವರಾನುಕರಣೆಗಳು, ಹಳ್ಳಿಯ ನರ್ತನಗಳು.

ಬಾಲಕರೇ ಹೊಸ ಕಥೆ, ಹಾಡು, ಶಿಶುಗೀತೆ ಮೊದಲಾದವುಗಳನ್ನು ರಚಿಸಿ ಹೇಳುವುದು, ತಮಗೆ ಒದಗಿಸಿರುವ ಚಿತ್ರಗಳ ಸಹಾಯದಿಂದ ಯಾವುದಾದರೂ ಒಂದೆರಡು ದೇಶೀಯರ ಮನೆಮಾರು, ಉಡುಗೆ, ತೊಡುಗೆಗಳನ್ನು ಚಿತ್ರಿಸಿ, ನಟಿಸಿ ತೋರಿಸುವುದು. ತಾವೇ ನಾಟಕದ ಕಥಾಯೋಚನೆ ಮಾಡಿ - ಪಾತ್ರ, ದೃಶ್ಯಗಳ ಸಿದ್ಧತೆ ಮಾಡಿ, ನಾಟಕವಾಡುವುದು. ಮೂಕನಾಟಕ-ಮಾತುಗಳಿಲ್ಲದೆ ಬರೇ ಅಭಿನಯದ ಕಥಾನಟನೆ, ಸಜೀವ ಗೊಂಬೆ ಆಟ, ತಾವೇ ಗೊಂಬೆಗಳಂತೆ ಶೃಂಗರಿಸಿಕೊಂಡು, ನಟಿಸಿ ಕಥೆಯೊಂದನ್ನು ಚಿತ್ರಿಸುವುದು. ವಿವಿಧ ಎಲೆ, ಹೂವುಗಳಿಂದ ಚಿತ್ರಲೇಖನ, ಚರಿತ್ರೆಯ ಯಾವುದಾದರೊಂದು ಭಾಗವನ್ನು ಸಮಯೋಚಿತ ಉಡುಗೆ, ತೊಡುಗೆಗಳಿಂದ ಚಿತ್ರಿಸಿ ತೋರಿಸುವುದು, ಚಿಕ್ಕಮಕ್ಕಳು, ಪಶುಪ್ರಾಣಿಗಳು, ರಾಕ್ಷಸರ ಕಥಾಭಿನಯ ಮಾಡುವುದು.

ಬಾಲಕರು ತಮಗೆ ದೊರಕುತ್ತಿರುವ ಶಿಕ್ಷಣ-ಸ್ವಾತಂತ್ರ್ಯಗಳ ವಿಷಯವಾಗಿ ಚರ್ಚೆ ನಡೆಸುವುದು, ಗಾದೆ, ಒಗಟುಗಳ ಸ್ಪರ್ಧೆ - ಇತ್ಯಾದಿ ನಡೆದರೆ, ಸಾಯಂಕಾಲದ ವಿನೋದಗಳಲ್ಲಿ -

ರಾತ್ರಿ ೮ರಿಂದ ೯.೩೦ರ ತನಕ ಮಾಯಾಲಾಂದ್ರದ ಕಥೆ, ಸಿನೆಮಾ, ಅಭಿನಯ ರೀತಿಗಳು, ನಾಟ್ಯ ರೂಪಗಳು, ಸಂಗೀತ ಕಾರ್ಯಕ್ರಮ ಇತ್ಯಾದಿಗಳು ನಡೆಯುತ್ತಿದ್ದವು. ಇಷ್ಟು ವ್ಯವಸ್ಥಿತವಾಗಿ ವೇಳಾಪಟ್ಟಿಯನ್ನು ರೂಪಿಸಿರುವ ಕಾರಂತರ ನೇತೃತ್ವದ ಮಕ್ಕಳ ಕೂಟಗಳು ಅದೆಷ್ಟು ಯಶಸ್ವಿ ಮತ್ತು ಪರಿಣಾಮಕಾರಿಯಾಗಿದ್ದಿರಬಹುದು ಎಂದು ದಯವಿಟ್ಟು ಸ್ವಲ್ಪ ಯೋಚಿಸಿ.

ಇತ್ತೀಚೆಗೆ ಅಂದರೆ ಕಾರಂತರು ಆರಂಭಿಸಿದ ೭೦ ವರ್ಷಗಳ ನಂತರದ ಶಿಬಿರ, ಕೂಟಗಳು ಇಷ್ಟು ಗಂಭೀರವಾಗಿ ಮಕ್ಕಳನ್ನು ತೊಡಗಿಸಿವೆಯೇ ಎಂದರೆ ಇಲ್ಲ ಎನ್ನುವುದು ಉತ್ತರವಾಗುತ್ತದೆ. ಅಥವಾ ಮಕ್ಕಳ ಶಿಬಿರ, ಕೂಟಗಳು ವ್ಯಾಪಾರೀಕರಣಗೊಂಡು ಹಣಮಾಡುವ ದಂಧೆಯಾಗಿರುವುದು ಅತ್ಯಂತ ಬೇಸರದ ಸಂಗತಿ.

ಕಾರಂತರೇ ಒಮ್ಮೆ ಹೇಳಿರುವ ಹಾಗೆ ಶಿಬಿರಗಳನ್ನು ಏರ್ಪಡಿಸುವುದು ಖೈದಿಗಳಿಗೆ ಅಥವಾ ಸೈನಿಕರಿಗೆ ಮಾತ್ರ. ಮಕ್ಕಳಿಗೆ ಏರ್ಪಡಿಸಬೇಕಾದದ್ದು ಮುಕ್ತ ಸ್ವಾತಂತ್ರ್ಯದ ಅವಕಾಶವಿರುವ ಕೂಟಗಳು ಎನ್ನುವ ಒರಟು ಮಾತಿನ ಹಿಂದಿರುವ ಸತ್ಯವನ್ನು ಗ್ರಹಿಸಬೇಕಾಗಿದೆ.

'ಮಕ್ಕಳಕೂಟ'ದ ಕುರಿತಾಗಿ ೧೯೩೨ರ ಜಯಕರ್ನಾಟಕ ಪತ್ರಿಕೆಯ ೨೩೦ನೇ

ಪುಟದಲ್ಲಿ ಪ್ರಕಟಗೊಂಡಿರುವ ಕೆಲವು ಸಾಲುಗಳನ್ನು ಗಮನಿಸಿ –

ಕರ್ನಾಟಕದ ಕೆಲವೆಡೆಗಳಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳು ಜನತೆಯ ಕೈಯಲ್ಲಿ ಬಂದಂದಿನಿಂದ ನಗೆಗೀಡಾದ ನರಕದಲ್ಲಿ ನರಳುತ್ತಿರುವಾಗ ಅದಕ್ಕೆ ವಿರುದ್ಧವಾದ ಮೊಳಹಳ್ಳಿ ಶಿವರಾಯರ ಶಿಕ್ಷಣ ಚಿಂತನೆಯ ರಚನೆಯನ್ನು ಕಂಡು ಪುತ್ತೂರನ್ನು ಅವರು ಮುತ್ತೂರನ್ನಾಗಿ ಮಾಡಿರುವರೆನ್ನಲು ಅಡ್ಡಿಯಿಲ್ಲ.

ಶ್ರೀ ಕಾರಂತರು ಅವರ ಯಾಜಮಾನ್ಯಕ್ಕೆ ಸರಿಯಾದ ಅಧ್ವರ್ಯುಗಳು. ಜನಸೇವೆಗೆ ತಮ್ಮ ಆಯುಷ್ಯವನ್ನೇ ಧಾರೆಯೆರೆದು ಸಮಾಜದ ಕೊಂಕುನಡೆಗಳ ಕನ್ನಡಿಯಾಗಿ ಖಂಡಿತವಾದಿಗಳೆಂದು ಹೆಸರಾದ ಅವರು ಮಕ್ಕಳ ಕಲಿಕೆಯಲ್ಲಿಯೂ ತುಂಬಾ ಆಸ್ಥೆಯುಳ್ಳವರು. ಮಕ್ಕಳ ಜೀವದೊಳಗಣ ಆಸೆ, ಹಿಗ್ಗುಗಳನ್ನು ಅರಿತು ಸವಿದವರು. ಮಕ್ಕಳ ಕೂಟದ ಸುಂದರ ಕಲ್ಪನೆಯ ಶ್ರೇಯಸ್ಸು ಅವರಿಗೇ ಸಲ್ಲುತ್ತದೆ. ಮಕ್ಕಳ ಕೂಟದಲ್ಲಿ ಒಳ್ಳೆಯ ಮಗುವಾಗಿ ನಕ್ಕು ನಲಿದಾಡುವ ಬಗೆ ಅವರಿಗಿದೆ. ಮಕ್ಕಳ ಕೂಟದಲ್ಲಿ ನಡೆದ ಚಟುವಟಿಕೆಗಳಿಂದ ವ್ಯಕ್ತಿ ವ್ಯಕ್ತಿಗಳಲ್ಲಿ ಹುದುಗಿರುವ ಸತ್ಯ, ನಿಲುವು ತಿಳಿಯಿತಲ್ಲದೆ ಪ್ರತಿಯೊಂದು ಮಗುವಿನ ಬಾಳ್ವೆಯೂ ಹಿಗ್ಗು ಹಾಲಿನಿಂದ ತುಂಬಿದ ಜೇನು ಬಟ್ಟಲವಾಯ್ತು. ಇಲ್ಲಿಯೇ ಅವುಗಳ ಸಾರ್ಥಕತೆ ಇದೆ. ಆ ಹಿಗ್ಗಿನ ಸೋಂಕು ತಾಗದೆ ಇರುವ ಹಿರಿಯರು ಉಳಿಯಲಿಲ್ಲ, ಎಲ್ಲರೂ ಮಕ್ಕಳೊಡನೆ ಆಡಿದರು, ಕುಣಿದರು, ಕೇಕೆ ಹೊಡೆದರು, ಹುಲ್ಲಲ್ಲಿ ಹೊರಳಿದರು. ಹಳ್ಳಿಯ ಹಾಡಿನ ಸವಿ ಸೊಬಗನ್ನು ಮನಸಾರೆ ಅನುಭವಿಸಿದರು. ೧೯೩೮ರಲ್ಲಿ ಪ್ರಕಟಗೊಂಡ ಇದೇ ಜಯ ಕರ್ನಾಟಕ ಪತ್ರಿಕೆಯಲ್ಲಿ ಮಕ್ಕಳ ನಾಟಕಗಳ ಕುರಿತಾಗಿ ಕಾರಂತರೇ ಬರೆದಿರುವ ಮಾತುಗಳನ್ನು ಗಮನಿಸಿ –

ನಮ್ಮ ನಾಡಿನಲ್ಲಿ ಮಕ್ಕಳ ನಾಟಕಗಳಿಗೆ ತುಂಬ ಕೊರತೆ ಇದೆ. ಮಕ್ಕಳ ನಾಟಕವೆಂದರೆ **ರಾಮರಾಜ್ಯ ವಿಯೋಗ, ಪ್ರಹ್ಲಾದ ಚರಿತ್ರೆ**. ಪ್ರಹ್ಲಾದ, ಭರತರು ಚಿಕ್ಕ ಕಾಯದವರಾದರೂ ಬೆಳೆದ ಬುದ್ಧಿಯವರು ಎಂಬುದು ನಮ್ಮ ನೆನಪಿನಲ್ಲಿರಬೇಕು. ಅಂಥ ನಾಟಕಗಳನ್ನು ಉರು ಹಾಕಿಸಿದರೆ ಯಾವ ಪುರುಷಾರ್ಥವೂ ಆಗಲಾರದು. ಅವರು ಆಡುವ ನಾಟಕದ ಭಾವನೆಗಳು ಅವರ ಮಿತಿಗೆ ಸಿಕ್ಕಿರಬೇಕು.

ಅಲ್ಲದೆ ಮಕ್ಕಳ ನಾಟಕಗಳು ಸ್ವತಂತ್ರ ಮಾರ್ಗದವು ಆಗಿದ್ದರೇನೇ ಒಳಿತು. ಅವರ ಮಾತುಗಳೇ ಅವರ ಬಾಯಿಂದ ಬಂದರೆ ಅವರು ಏನು ಕಲ್ಪಿಸುತ್ತಾರೆ ಎಂದು ನಮಗೂ ತಿಳಿಯುವುದು. ಅಲ್ಲದೆ ಸ್ವತಂತ್ರವಾಗಿ ಅಲ್ಲಲ್ಲಿಂದಲೇ ಮಕ್ಕಳು ಆಡುವ ನಾಟಕ ಭಾಷೆಯ ನೈಸರ್ಗಿಕ ರೀತಿಯು ಉರು ಹಾಕಿ ಉಗುಳಿದ ಮಾತುಗಳಿಂದ ಎಂದೂ ಬರಲಾರದು.

ಕಾರಂತರು ಕಾದಂಬರಿಕಾರರಾಗಿ, ಪರಿಸರವಾದಿಯಾಗಿ, ಮಹಾಮಾನವತಾ ವಾದಿಯಾಗಿ ೧೦೦ ವರುಷಗಳ ಕಾಲ ಪೂರ್ಣ ಕಾರ್ಯನಿರತರಾಗಿದ್ದರೆಂಬುದು ನಮಗೆಲ್ಲರಿಗೂ ತಿಳಿದಿರುವ ಸಂಗತಿಯೇ. ಅಂತಹ ಕಾರಂತರು ತಮ್ಮ ೨೫ರಿಂದ ೩೫ರ ನಡುವಣ ಅವಧಿಯಲ್ಲಿ ೧೦೦ಕ್ಕೂ ಹೆಚ್ಚು ನಾಟಕಗಳನ್ನು ಬರೆದು, ಅದರೊಂದಿಗೆ

ನಾಟಕದ ಪರದೆ, ದೀಪ ಮೊದಲಾದ ಪರಿಕರಗಳನ್ನು ಹೊತ್ತುಕೊಂಡು ವಾಹನದ ವ್ಯವಸ್ಥೆಯೇ ಇಲ್ಲದ ಆ ದಿನಗಳಲ್ಲಿ ಕಾಲುನಡಿಗೆಯಿಂದಲೇ ಬೆಟ್ಟ, ಗುಡ್ಡ, ಕಾಡು, ಮೇಡುಗಳನ್ನು ತುಳಿಯುತ್ತ ನದಿ, ತೋಡುಗಳನ್ನು ದಾಟುತ್ತ ಕುಗ್ರಾಮಗಳನ್ನು ತಲುಪಿ ಅಲ್ಲಿಯೇ ಜನರನ್ನು ಯೋಚನಾಪರರನ್ನಾಗಿಸಲು ಪ್ರಯತ್ನಿಸಿದವರು. ಅದರೊಂದಿಗೆ ತಮ್ಮ ನೂರಾರು ಮೈಲುಗಳ ಕಾಲ್ನಡಿಗೆಯ ಪ್ರಯಾಣವನ್ನು ದಾಖಲಿಸುತ್ತ ಬಂದಿರುವ ಲೇಖಕರು. ಬಹುಶಃ ಕಾರಂತರೊಬ್ಬರಿಂದಲೇ ಅದು ಸಾಧ್ಯವಾದದ್ದು. ರಂಗಭೂಮಿ ಯನ್ನು ಸಮಾಜ ಬದಲಾವಣೆಯ ಮಾಧ್ಯಮ ಎಂದು ದೃಢವಾಗಿ ನಂಬಿದ್ದರಿಂದಲೇ ಇಷ್ಟೊ ಕೆಲಸಗಳು ಸಾಧ್ಯವಾಗಿದ್ದಿರಬೇಕು.

ಕಾರಂತರ ರಂಗಚಟುವಟಿಕೆಗಳ ಇನ್ನೊಂದು ಮಹತ್ವದ ಅಧ್ಯಾಯ ಅವರು ಆರಂಭಿಸಿದ ಪುತ್ತೂರು ದಸರಾ ಮಹೋತ್ಸವದ ವಿವಿಧ ಕಾರ್ಯಕ್ರಮಗಳು. ಹತ್ತು ಹನ್ನೆರಡು ವರ್ಷಗಳ ಕಾಲ ಪ್ರತಿವರ್ಷವೂ ಅವರು ತಮ್ಮ ಸ್ನೇಹಿತರುಗಳ ಸಹಕಾರದಿಂದ ಪುತ್ತೂರಿನಲ್ಲಿ ದಸರಾ ಉತ್ಸವಗಳನ್ನು ಏರ್ಪಡಿಸಿ ಅದಕ್ಕಾಗಿ ವಿಶೇಷವಾಗಿ ಕೆಲಸ ಮಾಡುತ್ತಿದ್ದುದರಲ್ಲಿ ಇದು ಗೋಚರವಾಗುವುದು. ಕರ್ನಾಟಕದ ಬೇರೆ ಬೇರೆ ಕಡೆಗಳಿಂದ ಉಪನ್ಯಾಸ ನೀಡಲು, ಸಂಗೀತ ಕಾರ್ಯಕ್ರಮ ನಡೆಸಲು ಸ್ನೇಹಿತರನ್ನು ಕರೆತರುವುದು, ಹೊಸನಾಟಕಗಳನ್ನು ಬರೆದು ಮಕ್ಕಳನ್ನು ಸೇರಿಸಿ ಅವರಿಗೆ ಮಾರ್ಗದರ್ಶನ ನೀಡಿ ನಾಟಕಗಳನ್ನು ತಯಾರಿಸುವುದು, ಅವುಗಳಿಗೆ ಬೇಕಾದ ರಂಗ ಪರಿಕರಗಳನ್ನು ಸಿದ್ಧಗೊಳಿಸುವುದು, ಸ್ವತಃ ತಾವೇ ನಟರಾಗಿ ಪಾತ್ರ ವಹಿಸುವುದು, ಕುಣಿಯುವುದು ಇತ್ಯಾದಿ. ಎಲ್ಲ ಕೆಲಸಗಳನ್ನೂ ಒಬ್ಬರೇ ಮಾಡುತ್ತಿದ್ದುದು ಆಶ್ಚರ್ಯ, ಗೌರವ ಎಲ್ಲವನ್ನೂ ಉಂಟು ಮಾಡುತ್ತದೆ.

ಕಾರಂತರು ವಿಶೇಷವಾಗಿ ರೂಪಿಸಿದ ಛಾಯಾನಾಟಕಗಳ ಬಗ್ಗೆ ವಿವರಗಳನ್ನು ನೀಡ ಹೊರಟರೆ ಅದೊಂದು ಪ್ರತ್ಯೇಕ ಗೋಷ್ಠಿಯೇ ಆಗಬಹುದು. ವಿದ್ಯುದ್ದೀಪಗಳೇ ಇಲ್ಲದ ಅಂದಿನ ದಿನಗಳಲ್ಲಿ ನೆರಳು ಬೆಳಕಿನ ಆಟದ ಮೂಲಕ ರಂಗಕೃತಿಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಿರುವುದು ಅನನ್ಯ ಪ್ರಯೋಗವೇ. ಇಷ್ಟೆಲ್ಲ ಕೆಲಸ ಮಾಡಿದ ಕಾರಂತರನ್ನು ರಂಗಭೂಮಿಯ ಮುಖ್ಯವಾಹಿನಿಯ ಕಾರ್ಯಕರ್ತರನ್ನಾಗಿ ಗುರುತಿಸದೆ ಅವರ ಗೀತನಾಟಕಗಳನ್ನೇ ಪದೇ ಪದೇ ಉಲ್ಲೇಖಿಸುತ್ತಾ, 'ಬಹುಮುಖ ಪ್ರತಿಭೆಯ ಡಾ. ಶಿವರಾಮ ಕಾರಂತರು ಕನ್ನಡ ಗೀತನಾಟಕಗಳನ್ನು ಪ್ರಯೋಗಿಸಿದವರಲ್ಲಿ ಪ್ರಮುಖರು. ಅವರ **ಮುಕ್ತದ್ವಾರ, ಕಿಸಾಗೋತಮಿ, ಸೋಮಿಯ ಸೌಭಾಗ್ಯ** ಮುಂತಾದವುಗಳು ಒಳ್ಳೆಯ ಪ್ರಯೋಗಗಳು' ಎಂದಷ್ಟೇ ಹೇಳಿ ಸುಮ್ಮನಾಗುತ್ತಾರೆ.

ನಾನು ಇಲ್ಲಿ ಹೇಳ ಹೊರಟಿರುವುದು ಕಾರಂತರು ೧೯೩೦ರಲ್ಲಿ ಬರೆದು ಪ್ರಯೋಗಿಸಿದ **ಮುಕ್ತದ್ವಾರ** ಪ್ರಯೋಗದ ಕುರಿತು.

ಮಾನವ ಚರಿತ್ರೆಯಲ್ಲುಂಟಾದ ಬದಲಾವಣೆ, ಮತಧರ್ಮಗಳ ತಾಕಲಾಟ, ದಾರ್ಶನಿಕರ ಸಂದೇಹ, ಅಂಧಶ್ರದ್ಧೆ, ವಿಜ್ಞಾನದ ಹುಟ್ಟು ಮುಂತಾದ ಅಂಶಗಳನ್ನೊಳ ಗೊಂಡ ಗೀತರೂಪಕದ ಸಾಹಿತ್ಯಕ ವಿಶ್ಲೇಷಣೆಗೆ ಹೋಗದೆ, ಅವರು ರಂಗಕೃತಿಯಲ್ಲಿ

ಸೂಚಿಸಿರುವ ಕೆಲವು ನಿರ್ದೇಶನ ವಿವರಗಳನ್ನು ಓದುತ್ತೇನೆ. ಅಂದರೆ ಆವರಣದಲ್ಲಿ ಬರೆದಿರುವಂಥದ್ದು.

(ಅಂಧಕಾರ ಭೀಷಣ ಚಿತ್ರ- ಅನಂತವಾಗಿ ಕಾಣಿಸುವ ರಂಗಭೂಮಿ. ಬೆಳಕಂತೂ ಇಲ್ಲ, ಜನತೆಯಲ್ಲಿ ಸದ್ದೂ ಇಲ್ಲ, ಜೀವಕೋಟಿಯ ಸುಳಿವೇ ಇಲ್ಲ, ಆದಿಯ ಕತ್ತಲೆಯೇ ಇದು.)

(ಈ ಶೂನ್ಯ ಪ್ರಪಂಚದ ಒಂದು ಅಂಚಿನಲ್ಲಿ ಎಲ್ಲಿಂದಲೋ ಬೆಳಕಿನ ತೆರೆ ಯೊಂದು ಮೆಲ್ಲನೆ ಹೊಳೆಯ ತೊಡಗುತ್ತದೆ. ಇದೇ ಉಷೆಯಿರಬೇಕು. ತುಸು ಸಮಯ ಕಳೆಯುತ್ತಾ ಬರಲು ತೆರೆಯ ಅಂಚಿನಲ್ಲಿ ಹಿರಣ್ಯ ಗರ್ಭವೊಂದು ಉದಯಿಸುತ್ತದೆ.)

(ಈ ನವೀನ ರಂಗದಲ್ಲಿ ತೆಳ್ಳಗಿನ ಪರೆಯೊಂದು ಸರಿದು ಬಂದು ಈ ಎಲ್ಲ ದೃಶ್ಯಗಳನ್ನು ಮಬ್ಬಿನಲ್ಲಿ ಕೆಡವಿ ಬಿಡುತ್ತದೆ.)

(ತೆರೆಯನ್ನೊಡೆಯುವಂತೆ ಕಾಲ ನಟನೀಗ ಬರುತ್ತಾನೆ. ತನ್ನ ಸೃಷ್ಟಿಯ ಚಕ್ರವನ್ನು ತಿರುಗಿಸುವ ಕುಲಾಲನಂತೆ ನಲಿದು ಸರಿಯುತ್ತಾನೆ.)

(ಕಾಲದ ತೆರೆಯು ಸರಿದಿದೆ. ಅತ್ಯಂತ ಸುಂದರ ಸೃಷ್ಟಿಯೊಂದು ಬಂದಿದೆ. ಬಣ್ಣ ಬೆಡಗು ವೈವಿಧ್ಯಗಳು ಎಣಿಕೆಯಿಲ್ಲದಷ್ಟಿವೆ. ಆದರೂ ಭೇದ ವಿಕಾರಗಳಿಗೆ ಅವಕಾಶವಿಲ್ಲ.)

(ಕಾಲನು ಪುನಃ ಕುಣಿತಕ್ಕೆ ಅಣಿಯಾಗಿದ್ದಾನೆ. ಇಷ್ಟೆಲ್ಲ ಚಿತ್ರಗಳನ್ನು ಬರೆದು ಅಳಿಸಿಯಾಯಿತು. ಇನ್ನು ಬರೆವುದು ಏನೋ? ಯಾರು ಬಲ್ಲರು? ಇಲ್ಲೊಂದು ಕೊನೆಯಾಯಿತೆಂಬುದಿದೆಯೇ? ಇದೇ ತಿಳಿವಿನ ಬುಡವಿರಬಹುದು.)

ಇಷ್ಟು ವಿವರಗಳನ್ನು ಮಾಡಿರಿ ಎಂದು ಸೂಚಿಸುವ ಕಾರಂತರು ಈ ನಾಟಕವನ್ನು ರಚಿಸಿದ್ದು ವಿದ್ಯುದ್ದೀಪಗಳ ಬಳಕೆಯೇ ಗೊತ್ತಿಲ್ಲದ ೧೪ ಬತ್ತಿಯ ಜರ್ಮನ್ ಲ್ಯಾಂಪ್ ಗಳನ್ನು ಸಾಲಾಗಿ ತೂಗಿಸಿ ನಾಟಕ ಪ್ರಯೋಗ ಮಾಡುತ್ತಿದ್ದ ೧೯೩೦ರಲ್ಲಿ ಎಂಬುದು ಅಚ್ಚರಿ ಮೂಡಿಸುವ ಸಂಗತಿಯಲ್ಲವೇ?

ಇವತ್ತಿಗೂ ನಮ್ಮ ಶಾಲಾ ಉತ್ಸವಗಳಲ್ಲಿ ಬೆಳಕಿನ ಬಳಕೆಯ ಬಗ್ಗೆ ಏನೇನೂ ಗಮನಕೊಡದೇ ಇರುವುದನ್ನು ಗಮನಿಸುವಾಗ 'ಬಾಳ್ವೆಯೇ ಬೆಳಕು' ಎಂದ ಕಾರಂತರನ್ನು ಆರಾಧಿಸಬೇಕೇ ಹೊರತು ಬೇರೇನನ್ನೂ ಮಾಡಲಾರೆ.

ಇವತ್ತು ಶಿಕ್ಷಣದಲ್ಲಿ ರಂಗಭೂಮಿಯ ಬಳಕೆಯ ಬಗ್ಗೆ ವಿಶೇಷವಾಗಿ ಚರ್ಚಿಸ ಲಾಗುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಚೌಕಟ್ಟಿನಲ್ಲಿಯೂ ಈ ಬಗ್ಗೆ ಉಲ್ಲೇಖಿಸ ಲಾಗಿದೆ. ಶಿಫಾರಸ್ಸುಗಳನ್ನು ಮಾಡಲಾಗಿದೆ. ನಮ್ಮ ಮಕ್ಕಳು ನಮ್ಮ ಸಾಂಸ್ಕೃತಿಕ ವೈವಿಧ್ಯತೆಯ ಅರಿವನ್ನು ಹೊಂದದೇ ಇದ್ದರೆ, ಸಾಂಸ್ಕೃತಿಕ ಅಸ್ತಿತ್ವದ ಶ್ರೀಮಂತಿಕೆಯನ್ನು ತಿಳಿಯದೇ ಇದ್ದರೆ, ಕಲಾತ್ಮಕ ಅಭಿರುಚಿಯ ಕುರಿತಾಗಿ ಪ್ರೋತ್ಸಾಹ ನೀಡದೇ ಇದ್ದರೆ ಮಕ್ಕಳ ಸೃಜನಶೀಲತೆಗೆ ನಾವೇ ಮಾರಕ ಹೊಡೆತ ನೀಡಿದಂತಾದೀತು ಎಂದೆಲ್ಲ ನ್ಯಾಷನಲ್ ಕರಿಕುಲಂ ಫ್ರೇಂವರ್ಕ್‌ನಲ್ಲಿ ಖಚಿತವಾಗಿ ಹೇಳಲಾಗಿದೆ. ಹಾಗಾಗಿ ಶಿಕ್ಷಣ ದಲ್ಲಿ ರಂಗಭೂಮಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು ಎಂದು ಪ್ರಸನ್ನ ಉಪವಾಸ ಕುಳಿತುಕೊಳ್ಳುವ ತನಕ ಚರ್ಚೆಗಳು ಮುನ್ನಡೆದಿದೆ.

ಆದರೆ ಡಾ. ಕಾರಂತರು ಶಿಕ್ಷಣ, ರಂಗಭೂಮಿ, ಪರಿಸರ, ಸಾಹಿತ್ಯ ಮತ್ತು ಸಮಾಜವನ್ನು ಬೇರೆ ಬೇರೆಯಾಗಿ ಪರಿಗಣಿಸದೆ ಒಂದೇ ಎಂದು ನಂಬಿ ಕೆಲಸ ಮಾಡಿದವರಾದುದರಿಂದ ಅವರು ಶಾಲೆ ಶಾಲೆಗೆ ಭೇಟಿ ನೀಡಿ ನಡೆಸಿದ ಶಿಕ್ಷಣ ಸಂವಾದಗಳು, ಪುತ್ತೂರಿನಲ್ಲಿರುವ ಬಾಲವನದಲ್ಲಿ ನಡೆಸಿದ ಶಿಕ್ಷಣ ಪ್ರಯೋಗಗಳು, ಅವರಿಗೆ ಅಪಾರ ಗೌರವ, ಹೆಸರು ತಂದ ಯಕ್ಷಗಾನದ ಪ್ರಯೋಗಗಳು, ಅವರು ಭಾಷೆ, ಸಂಸ್ಕೃತಿ, ಸಂಶೋಧನೆಗಳಲ್ಲಿ ಮಾಡಿದ ಹೊಸ ಹೊಸ ಪ್ರಯೋಗಗಳನ್ನು ಈ ಸಂದರ್ಭದಲ್ಲಿ ವಿವರಿಸುವ ಪ್ರಯತ್ನ ಮಾಡದೆ ಕಾರಂತರ ಒಟ್ಟು ರಂಗಪ್ರಯತ್ನಗಳಿಗೆ ತಲೆಬಾಗಿ ನಮಸ್ಕರಿಸಿ, ಅವುಗಳು ನಮ್ಮ ಮುಂದಿನ ರಂಗಪ್ರಯೋಗಗಳಿಗೆ ಮಾರ್ಗಸೂತ್ರಗಳಾಗಲಿ ಎಂದು ಆಶಿಸುತ್ತೇನೆ.